ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-7 Issue-4, January - February 2026, Pp. 105-112
©*IIMRD*, Mysuru

IIMRD JOURNALS
www.iimrd.com

# ರಾಜಕೀಯ ಕ್ಷೇತ್ರದಲ್ಲಿ ಡೀಪ್‌ಫೇಕ್‌ಗಳ ಏರಿಕೆ ಮತ್ತು ಮಾಧ್ಯಮ ಸಮಗ್ರತೆಯ ಸವಾಲುಗಳು

**ದಾದಾಗೌಡ ಪಾಟೀಲ[1] ಮತ್ತು ಡಾ.ವಸುಂದರಾ ಪ್ರಿಯದರ್ಶಿನಿ ಮಹಾದೇವ್[2]**
[1]ಸಂಶೋಧನಾ ವಿದ್ಯಾರ್ಥಿ, [2]ಸಹಾಯಕ ಪ್ರಾಧ್ಯಾಪಕರು
ಸಂವಹನ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

**ಸಾರಾಂಶ: (Abstract)**

*ಡೀಪ್‌ಫೇಕ್ ತಂತ್ರಜ್ಞಾನವು ರಾಜಕೀಯ ಕ್ಷೇತ್ರದಲ್ಲಿ ಹಲವು ರೀತಿಯ ಪರಿಣಾಮಗಳಿಗೆ ಕಾರಣವಾಗಿದೆ. ಕೃತಕ ಬುದ್ಧಿಮತ್ತೆಯ ಇತ್ತೀಚಿನ ಪ್ರಾಯೋಗಿಕ ಪ್ರಗತಿಗಳು ಡೀಪ್‌ಫೇಕ್‌ಗಳ ವಿದ್ಯಮಾನಕ್ಕೆ ಕಾರಣವಾಗಿವೆ. ರುದಯ ರಾಂಕಾ ಮತ್ತು ಮೋಕ್ಷಿತ ಸುರಾನಾ (2024) ರವರ ಅಧ್ಯಯನದಲ್ಲಿ ಚುನಾವಣೆ ಪ್ರಕ್ರಿಯೆ ಮೇಲೆ ಡೀಪ್‌ಫೇಕ್ ಪರಿಣಾಮ ಬೀರುತ್ತಿದೆ ಎಂದು ತಿಳಿಸಲಾಗಿದೆ. ಸುಳ್ಳು, ಆಕ್ಷೇಪಾರ್ಹ ವಿಡಿಯೋಗಳು ಅಥವಾ ಆಡಿಯೋಗಳು ವೈರಲ್ ಆಗುವುದರಿಂದ ಮತದಾರರ ಅಭಿಪ್ರಾಯ ಬದಲಾಯಿಸಬಹುದಾಗಿದೆ ಎನ್ನಲಾಗಿದೆ. ಇತ್ತೀಚಿನ ದಿನಗಳಲ್ಲಿ ಸಾಮಾಜಿಕ ಮಾಧ್ಯಮಗಳಲ್ಲಿ ಹೆಚ್ಚಿನ ಸಂಖ್ಯೆಯ ಡೀಪ್‌ಫೇಕ್ ವಿಡಿಯೋಗಳು ವೈರಲ್ ಆಗುತ್ತಿವೆ. ರಾಜಕೀಯ ನಾಯಕರ ಭಾಷಣಗಳು ಮತ್ತು ಮಾತುಗಳನ್ನು ತಿರುಚಿ ತೋರಿಸುವ ಪ್ರಕರಣಗಳು ದಾಖಲಾಗಿವೆ. ಇದು ಜನರಲ್ಲಿ ತೀವ್ರ ತಪ್ಪು ತಿಳುವಳಿಕೆ ಮೂಡಿಸುತ್ತದೆ. ಅಲ್ಲದೇ ಡೀಪ್‌ಫೇಕ್ ನಕಲಿ ಸುದ್ದಿಗಳ ಒಂದು ರೂಪವೆಂದು ಪರಿಗಣಿಸಬಹುದು. ಐವಾನ್ ಝುವಿ ಬರೋನ್ ಮತ್ತು ಪಿಕಿ ಇಶ್–ಶಾಲೋಮ್ (2024) ಅವರ ಅಧ್ಯಯನದಲ್ಲಿ ರಾಜಕೀಯ ಕ್ಷೇತ್ರದಲ್ಲಿ ಫೇಕ್‌ನ್ಯೂಸ್ ಹೇಗೆ ಪರಿಣಾಮ ಬೀರಿದೆ ಎಂದು ತಿಳಿಸಲಾಗಿದೆ. ಫೇಕ್‌ನ್ಯೂಸ್‌ಗಳಿಂದ ಸಮಾಜದಲ್ಲಿ ಹಲವಾರು ಸಮಸ್ಯೆಗಳನ್ನು ಎದರಿಸುವಂತಾಗಿದೆ. ಮಾಧ್ಯಮ ಸಂಸ್ಥೆಗಳು ಮತ್ತು ಸಾಮಾಜಿಕ ಮಾಧ್ಯಮಗಳಿಗೆ ಡೀಪ್‌ಫೇಕ್‌ಗಳನ್ನು ತಡೆಯುವುದು ಸವಾಲಿನ ಕೆಲಸವಾಗಿದೆ. ಇತ್ತೀಚಿಗೆ ನಡೆದ ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಡೀಪ್‌ಫೇಕ್‌ಗಳಿಂದ ಮತದರಾರರ ಮೇಲೆ ಆಗಿರುವ ಪರಿಣಾಮಗಳೇನು ಎಂಬುವುದನ್ನು ತಿಳಿದುಕೊಳ್ಳಲು ವಿಷಯ ವಿಶ್ಲೇಷಣೆ ಮತ್ತು ಕೇಸ್‌ಸ್ಟಡಿ ವಿಧಾನದ ಮೂಲಕ ಅಧ್ಯಯನ ನಡೆಸಲಾಗುತ್ತದೆ.*

**ಮುಖ್ಯಪದಗಳು (Keywords):** *ರಾಜಕೀಯ ಸಂವಹನ, ಫೇಕ್ ನ್ಯೂಸ್, ಡೀಪ್‌ಫೇಕ್, ಸಾಮಾಜಿಕ ಮಾಧ್ಯಮಗಳು, ಮಾಧ್ಯಮ ಬಳಕೆದಾರರು.*

## ಪೀಠಿಕೆ

ಸಮಾಜದಲ್ಲಿ ದಿನನಿತ್ಯ ನಡೆಯುವ ಯಾವುದೇ ಘಟನೆಗಳನ್ನು, ಮಾಹಿತಿಯನ್ನ ತಿಳಿದುಕೊಳ್ಳಲು ಸಾರ್ವಜನಿಕರು ಸಾಮಾಜಿಕ ಜಾಲತಾಣಗಳ ಮೊರೆ ಹೋಗುತ್ತಿದ್ದಾರೆ. ಸಾಮಾಜಿಕ ಮಾಧ್ಯಮಗಳ ಮೂಲಕ

*Please cite this article as:* ದಾದಾಗೌಡ ಪಾಟೀಲ ಮತ್ತು ವಸುಂದರಾ ಪ್ರಿಯದರ್ಶಿನಿ ಮಹಾದೇವ್. (2026). ರಾಜಕೀಯ ಕ್ಷೇತ್ರದಲ್ಲಿ ಡೀಪ್‌ಫೇಕ್‌ಗಳ ಏರಿಕೆ ಮತ್ತು ಮಾಧ್ಯಮ ಸಮಗ್ರತೆಯ ಸವಾಲುಗಳು. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 7(4). ಪು.ಸಂ.* 105–112

ದೇಶ ವಿದೇಶಗಳಲ್ಲಿ ನಡೆಯುವ ಘಟನೆಗಳ ಬಗ್ಗೆ ಕ್ಷಣಾರ್ಧದಲ್ಲೇ ತಿಳಿದುಕೊಳ್ಳಬಹುದಾಗಿದೆ. ನಾವು ಯಾವುದೇ ಸ್ಥಳದಲ್ಲಿ ಇರಲಿ ಪ್ರಪಂಚದಾದ್ಯಂತ ನಡೆದ ಘಟನೆಗಳನ್ನು ತಿಳಿದುಕೊಳ್ಳಲು ಸಾಮಾಜಿಕ ಮಾಧ್ಯಮಗಳು ಸಹಾಯಕಾರಿಯಾಗುತ್ತವೆ. ಆದರೆ ಡೀಪ್‌ಫೇಕ್ ತಂತ್ರಜ್ಞಾನ ಅತ್ಯಾಧುನಿಕವಾಗಿರುವುದರಿಂದ ಅಪಾಯಕಾರಿ ರೀತಿಯಲ್ಲಿ ಜಟಿಲವಾಗುತ್ತಿದೆ. ದುರುದ್ದೇಶಪೂರಿತ ಡೀಪ್‌ಫೇಕ್ ವಿಡಿಯೋಗಳು ಮತ್ತು ಆಡಿಯೋಗಳು ಸಮಾಜದ ಸ್ವಾಸ್ಥ್ಯವನ್ನು ಹಾಳಾಗಲು ಕಾರಣವಾಗುತ್ತಿವೆ. ಡೀಫ್‌ಫೇಕ್ ಬಗ್ಗೆ ಅಧ್ಯಯನ ಮಾಡುವುದರಿಂದ ಕೆಲವು ಉಪಯುಕ್ತ ಮಾಹಿತಿಯನ್ನು ತಿಳಿದುಕೊಳ್ಳಲು ಅನುಕೂಲವಾಗುತ್ತದೆ. ಉದಾಹರಣೆಗೆ ನಕಲಿ ವೀಡಿಯೋಗಳಲ್ಲಿನ ವಿಷಯಗಳು ಸಾಮಾನ್ಯವಾಗಿ ಮನುಷ್ಯರಿಗಿಂತ ಕಡಿಮೆ ಕಣ್ಣು ಮಿಟುಕಿಸುತ್ತವೆ, ಇದರಿಂದಾಗಿ ವಿಡಿಯೋ ನಕಲಿ ಎಂದು ಕಂಡು ಹಿಡಿಯಲು ಸಾಧ್ಯವಾಗುತ್ತದೆ. ನಮ್ಮ ದೇಶದ ಚುನಾವಣೆಯ ಪ್ರಕ್ರಿಯೆಗಳ ಮೇಲೆ ಡೀಫ್‌ಫೇಕ್‌ಗಳ ಹೊರಹೊಮ್ಮುವಿಕೆಯು ಕಳವಳವನ್ನು ಹುಟ್ಟುಹಾಕುತ್ತಿದೆ.

ಡೀಫ್‌ಫೇಕ್ ಆಡಿಯೋ ಮತ್ತು ವಿಡಿಯೋಗಳನ್ನು ರಚಿಸಿ ಮತದಾರರನ್ನು ಹೆಚ್ಚು ವೈಯಕ್ತೀಕರಿಸಿದ ಪ್ರಚಾರದೊಂದಿಗೆ ಹರಿಬಿಡಲಾಗುತ್ತಿದೆ. ಕೃತಕ ಬುದ್ದಿಮತ್ತೆ ಬಳಸಿಕೊಂಡು ರಾಜಕೀಯ ಎದುರಾಳಿಗಳ ಕುರಿತ ಡೀಫ್‌ಫೇಕ್ ವೀಡಿಯೋಗಳನ್ನು ರಚಿಸಲಾಗುತ್ತಿದೆ. ಈ ಮೂಲಕ ಅವರ ರಾಜಕೀಯ ಇಮೇಜ್ ಅನ್ನು ಕಳಂಕಗೊಳಿಸಬಹುದಾಗಿದೆ. ಅಲ್ಲದೇ ಇದರಿಂದ ಮತದಾರರ ಗ್ರಹಿಕೆಗಳ ಮೇಲೆ ಪ್ರಭಾವ ಬೀರಬಹುದು ಮತ್ತು ಚುನಾವಣಾ ಪರೀಕಲ್ಪನೆಯನ್ನು ಹುಟ್ಟುಹಾಕಬಹುದು. ಡೀಫ್‌ಫೇಕ್ ಎಂಬ ಪದವು ಎಐ ಸಾಫ್ಟ್‌ವೇರ್ ಮೂಲಕ ನಕಲಿ ವೀಡಿಯೋಗಳು, ಆಡಿಯೋ ಮತ್ತು ಇತರ ವಿಷಯಗಳನ್ನ ನಿರ್ಮಿಸಲು ಬಳಸುವುದನ್ನು ಸೂಚಿಸುತ್ತದೆ. ಇದು ಚುನಾವಣೆಗಳ ಸಮಗ್ರತೆಗೆ ಗಂಭೀರ ಅಪಾಯವನ್ನುಂಟುಮಾಡುತ್ತದೆ ಮತ್ತು ಸಾರ್ವಜನಿಕ ನಂಬಿಕೆಯನ್ನು ದುರ್ಬಲಗೊಳಿಸುತ್ತದೆ.

ಉದ್ದೇಶಪೂರ್ವಕವಾಗಿ ಅಥವಾ ಉದ್ದೇಶಪೂರ್ವಕವಲ್ಲದೇ ವ್ಯಕ್ತಿಯನ್ನು ದಾರಿ ತಪ್ಪಿಸುವ ಮೋಸವು ಢೀಫ್‌ಫೇಕ್‌ಗಳ ಕೇಂದ್ರ ಬಿಂದುವಾಗಿದೆ. ಸಂದೇಶಗಳನ್ನು ನಿರ್ಣಯಿಸುವಾಗ ಜನರು ಮೋಸವನ್ನು ಕಂಡುಹಿಡಿಯಲು ಸಾಧ್ಯವಾಗುವುದಿಲ್ಲ. ಯಾವುದೇ ಒಂದು ಸಂದೇಶವನ್ನು ಸತ್ಯ ಅಥವಾ ಮೋಸ ಎಂದು ಮೌಲ್ಯಮಾಪನ ಮಾಡುವಾಗ ಜನರು ಸತ್ಯವುಳ್ಳ ಮಾಹಿತಿಯನ್ನ ಪಡೆದುಕೊಳ್ಳಲು ಒಲವು ತೋರಿಸುತ್ತಾರೆ. ಡಿಜಿಟಲ್ ಪ್ರಪಂಚವು ಕ್ಷಿಪ್ರ ಪ್ರಗತಿಗೆ ಒಳಗಾಗಿದೆ. ಇದರ ಪರಿಣಾಮವಾಗಿ ವಾಸ್ತವ ಮತ್ತು ಕಾಲ್ಪನಿಕತೆಯ ನಡುವಿನ ಗಡಿಗಳನ್ನು ಮುಸುಕುಗೊಳಿಸುವ ಅತ್ಯಾಧುನಿಕ ತಂತ್ರಜ್ಞಾನಿಗಳು ಹೊರಹೊಮ್ಮಿವೆ. ಢೀಫ್‌ಫೇಕ್ ತಂತ್ರಜ್ಞಾನವು ಅದರ ಸಂಭ್ಯಾವ ಪರಿಣಾಮಗಳು ಮತ್ತು ಅಪಾಯಕಾರಿ ಪರಿಣಾಮಗಳಿಂದಾಗಿ ಕಳವಳಕ್ಕೆ ಕಾರಣವಾಗಿದೆ.

**ಸಾಹಿತ್ಯ ವಿಮರ್ಶೆ**

ರುದಯ ರಾಂಕಾ ಮತ್ತು ಮೋಕ್ಷಿತ ಸುರಾನಾ (2024) **"**ಚುನಾವಣಾ ಸಮಗ್ರತೆಗಾಗಿ ಡೀಪ್‌ಫೇಕ್‌ಗಳ ಪರಿಣಾಮಗಳ ಪರಿಶೀಲನೆ**"** ಈ ಅಧ್ಯಯನದಲ್ಲಿ ಚುನಾವಣೆ ಪ್ರಕ್ರಿಯೆ ಮೇಲೆ ಢೀಫ್‌ಫೇಕ್ ಪರಿಣಾಮ ಬೀರುತ್ತಿದೆ ಎಂದು ತಿಳಿಸಲಾಗಿದೆ. ಸುಳ್ಳು, ಆಕ್ಷೇಪಾರ್ಹ ವಿಡಿಯೋಗಳು ಅಥವಾ ಆಡಿಯೋಗಳು ವೈರಲ್

ಆಗುವುದರಿಂದ ಮತದಾರರ ಅಭಿಪ್ರಾಯ ಬದಲಾಯಿಸಬಹುದಾಗಿದೆ ಎಂಬ ಮಹತ್ವದ ವಿಷಯವನ್ನು ಈ ಅಧ್ಯಯನದ ಮೂಲಕ ತಿಳಿದುಕೊಳ್ಳಲಾಗಿದೆ.

ಐವಾನ್ ಝುವಿ ಬರೋನ್ ಮತ್ತು ಪಿಕಿ ಇಶ್–ಶಾಲೋಮ್ (2024) "ನಕಲಿ ಸುದ್ದಿಗಳ ಬೆದರಿಕೆಯನ್ನು ಅನ್ವೇಷಿಸುವುದು: ಸತ್ಯಗಳು, ಅಭಿಪ್ರಾಯಗಳು ಮತ್ತು ತೀರ್ಪು" ಎಂಬ ಸಂಶೋಧನಾ ಬರಹ ಪ್ರಕಟಿಸಲಾಗಿದೆ. ರಾಜಕೀಯ ಕ್ಷೇತ್ರದಲ್ಲಿ ಫೇಕ್‌ನ್ಯೂಸ್ ಹೇಗೆ ಪರಿಣಾಮ ಬೀರಿದೆ ಎಂದು ಈ ಅಧ್ಯಯನದಲ್ಲಿ ತಿಳಿಸಲಾಗಿದೆ. ನಿಜಾಂಶ ಮತ್ತು ನಕಲಿ ಮಾಹಿತಿಗಳನ್ನು ಗುರುತಿಸುವುದು ಕಷ್ಟವಾಗುವುದರಿಂದ ಮಾಧ್ಯಮದ ನಂಬಿಕೆಯನ್ನು ಕುಂದಿಸುತ್ತಿದೆ ಎಂಬುವುದನ್ನು ತಿಳಿದುಕೊಳ್ಳಲು ಈ ಅಧ್ಯಯನ ಸಹಾಯಕಾರಿಯಾಗಿದೆ.

ಬೇಕರ್ ಮತ್ತು .ಲೇಕಾಕ್ (2023) ಇವರ ಸಂಶೋಧನಾ ಲೇಖನ ಅಧ್ಯಯನ ಮಾಡಿದಾಗ ಎಐ ರಚಿಸಿದ ಚಿತ್ರಗಳು ಮತ್ತು ಡೀಫ್‌ಫೇಕ್‌ಗಳ ಇವೆರಡೂ ಕೃತಕ ಬುದ್ದಿಮತ್ತೆಯನ್ನು ಬಳಸುತ್ತವೆ. ಅವು ಪ್ರಾಥಮಿಕವಾಗಿ ವಿಷಯ ರಚನೆ ಉದ್ದೇಶವನ್ನು ಹೊಂದಿರುತ್ತವೆ. ಮೊದಲನೆಯದು ನೈಜ ದತ್ತಾಂಶದಿಂದ ವಾಸ್ತವಿಕ ಚಿತ್ರಗಳ ರಚನೆಯನ್ನು ಒಳಗೊಂಡಿರುತ್ತದೆ. ಆದರೆ ಎರಡನೆಯದು ತಾಂತ್ರಿಕವಾಗಿ ಅದರ ಉಪವಿಭಾಗ ಸಾಮಾನ್ಯವಾಗಿ ವೀಕ್ಷಕರನ್ನು ಅಧಿಕೃತ ವಿಷಯವನ್ನು ನಂಬುವಂತೆ ಮೋಸಗೊಳಿಸುವ ಗುರಿಯನ್ನು ಹೊಂದಿದೆ ಎಂಬುವುದನ್ನು ತಿಳಿದುಕೊಳ್ಳಲು ಸಹಾಯಕಾರಿಯಾಗಿದೆ.

ಉಚಿತ ಜಯವಿಕ್ರಮ, ಎಮ್ಯಾನುಯೆಲ್ ಒಗಿಮೊನ್ವಿ ಅರಕ್ವೋಗುನ್, ಜನ ಸುಕ್ಲಾನ್, ಶಾಫೆಂಗ್ ಲಿಯು (2022) "ಸಾಮಾಜಿಕ ಮಾಧ್ಯಮದಲ್ಲಿ ಫೇಕ್ ನ್ಯೂಸ್ : ಸಮಾಜದ ಮೇಲೆ ಪರಿಣಾಮ" ಎಂಬ ಸಂಶೋಧನ ಅಧ್ಯಯನದಲ್ಲಿ ಆಧಾರ ರಹಿತ ಸುದ್ದಿಗಳು ಸಮಾಜದ ಸ್ವಾಸ್ಥ್ಯವನ್ನು ಕೆಡಿಸುತ್ತದೆ ಎಂಬುವುದನ್ನು ತಿಳಿಸಲಾಗಿದೆ. ಪ್ರಶ್ನಾವಳಿ ವಿಧಾನ ಈ ಅಧ್ಯಯಕ್ಕೆ ಬಳಸಿಕೊಂಡಿದ್ದಾರೆ. ಸಮಾಜವನ್ನು ಪ್ರತ್ಯೇಕಿಸುವಲ್ಲಿ ಆಧಾರ ರಹಿತ ಮತ್ತು ವೈಭವೀಕರಣದ ಸುದ್ದಿಗಳು ಪ್ರಮುಖ ಪಾತ್ರ ವಹಿಸುತ್ತವೆ, ನಿಜವಾದ ಸುದ್ದಿಗಳನ್ನು ನಕಲಿ ಸುದ್ದಿಗಳು ಮರೆಮಾಚುತ್ತವೆ ಎಂಬ ವಿಷಯವನ್ನು ಈ ಅಧ್ಯಯನದ ಮೂಲಕ ತಿಳಿದುಕೊಳ್ಳಲಾಗಿದೆ.

**ಅಧ್ಯಯನದ ಮಹತ್ವ**

ತಂತ್ರಜ್ಞಾನ ಬೆಳವಣಿಗೆಯಾದಂತೆ ಸಾಮಾಜಿಕ ಮಾಧ್ಯಮಗಳು ಮಾಧ್ಯಮ ಕ್ಷೇತ್ರದಲ್ಲಿ ಕ್ರಾಂತಿಯನ್ನೇ ಮಾಡಿವೆ. ಸಾರ್ವಜನಿಕರು ಅತಿ ಹೆಚ್ಚು ಸಾಮಾಜಿಕ ಮಾಧ್ಯಮಗಳ ಬಳಕೆಯಲ್ಲಿ ತೊಡಗಿಕೊಂಡಿದ್ದಾರೆ. ಮಾಹಿತಿ ಮತ್ತು ಮನರಂಜನೆಗಾಗಿ ಜನರು ದಿನ ನಿತ್ಯ ಫೇಸ್‌ಬುಕ್, ಇನ್‌ಸ್ಟಾಗ್ರಾಂ, ಟ್ವೀಟರ್(ಎಕ್ಸ್) ಸೇರಿ ಹಲವು ಪ್ಲಾಟ್‌ಫಾರ್ಮ್‌ಗಳನ್ನು ಬಳಕೆ ಮಾಡುತ್ತಿದ್ದಾರೆ. ಸಾಮಾಜಿಕ ಮಾಧ್ಯಮಗಳಲ್ಲಿ ಹರಡುವ ಕೆಲ ನಕಲಿ ಪೋಸ್ಟ್‌ಗಳು ಜನರ ದಾರಿ ತಪ್ಪಿಸುವ ಕೆಲಸ ಮಾಡಿಸುತ್ತಿದೆ. ಅಲ್ಲದೇ ಚುನಾವಣೆ ಪ್ರಕ್ರಿಯೆ ಸಂದರ್ಭದಲ್ಲಿ ಡೀಫ್‌ಫೇಕ್, ನಕಲಿ ಸುದ್ದಿಗಳು ಮೂಲಕ ಮಾಹಿತಿಯನ್ನು ತಿರುಚಿ ಹರಿಬೀಡಲಾಗುತ್ತದೆ. 2024ರ ಲೋಕಸಭಾ ಚುನಾವಣೆ ಸಮಯದಲ್ಲಿ ಡೀಫ್‌ಫೇಕ್‌ಗಳನ್ನು ತಡೆಯಲು ಚುನಾವಣಾ ಆಯೋಗ ಕಟ್ಟು

ನಿಟ್ಟಿನ ಕ್ರಮ ಕೈಗೊಂಡಿತ್ತು. ರಾಜಕೀಯ ಪಕ್ಷದ ಮತ್ತು ನಾಯಕರ ಸಾಮಾಜಿಕ ಜಾಲತಾಣಗಳ ಮೇಲೆ ಕಣ್ಣಿಟ್ಟಿದ್ದ ಚುನಾವಣಾ ಆಯೋಗ ಪ್ರತಿಯೊಂದು ಹಂತದಲ್ಲಿಯೂ ಡೀಫ್‌ಫೇಕ್ ತಡೆಯಲು ಎಚ್ಚರ ವಹಿಸಿತ್ತು. ಚುನಾವಣೆ ಸಮಯದಲ್ಲಿ ಡೀಫ್‌ಫೇಕ್, ನಕಲಿ ಸುದ್ದಿಗಳು ಮತದಾರರ ಮೇಲೆ ಯಾವ ರೀತಿ ಪ್ರಭಾವ ಬೀರಬಹುದು ಎಂಬುವುದನ್ನು ವಿಶ್ಲೇಷಣೆ ಮಾಡುವುದು, ರಾಜಕೀಯದಲ್ಲಿ ಡೀಫ್‌ಫೇಕ್‌ಗಳ ಪರಿಣಾಮ ಕುರಿತು ತಿಳಿಯುವುದು ಸಂಶೋಧನೆಯ ಉದ್ದೇಶವಾಗಿದೆ.

**ನಕಲಿ ಸುದ್ದಿಗಳು**

ಡಿಜಿಟಲ್ ಮಾಧ್ಯಮದಲ್ಲಿ ಸುದ್ದಿಗಳು ವೇಗವಾಗಿ ಹರಡುತ್ತವೆ. ಜನರನ್ನು ಆಕರ್ಷಿಸುವಂತಹ ಸುದ್ದಿಗಳನ್ನು ಕೊಡುವ ಭರದಲ್ಲಿ ಮಾಧ್ಯಮಗಳು ಸುದ್ದಿಯನ್ನು ವೈಭವೀಕರಿಸುತ್ತವೆ. ಸುದ್ದಿಯ ಜೊತೆಗೆ ಕೆಲವೊಂದು ಊಹೆಗಳನ್ನು ಸೇರಿಸಿ ಬಿಡುವುದರ ಜೊತೆಗೆ ಆಧಾರ ರಹಿತ ಸುದ್ದಿಗಳು ಮಾಧ್ಯಮದಲ್ಲಿ ಬಿತ್ತರಿಸಲಾಗುತ್ತದೆ. ನಕಲಿ ಸುದ್ದಿಗಳು ನಿಜಾಂಶದಿಂದ ಕೂಡಿರುವುದಿಲ್ಲ, ಊಹೆ ಮಾಡಿಕೊಂಡಿರುವ ಸುದ್ದಿಗಳು, ಅಲ್ಲದೇ ಆಧಾರರಹಿತ ಸುದ್ದಿಗಳೇ ನಕಲಿ ಸುದ್ದಿಗಳಾಗಿವೆ. ಕೆಲವು ಸಂದರ್ಭದಲ್ಲಿ ಮಾಧ್ಯಮದಲ್ಲಿ ಬರುವ ಎಲ್ಲ ಸುದ್ದಿಗಳು ಸತ್ಯಕ್ಕೆ ದೂರವಾಗಿರುತ್ತವೆ. ಸಾರ್ವಜನಿಕರು ನಕಲಿ ಸುದ್ದಿಗಳ ಬಗ್ಗೆ ತಿಳಿದುಕೊಳ್ಳದೇ ಇದ್ದರೆ ಮೋಸ ಹೋಗಬೇಕಾಗುತ್ತದೆ.

**ಡೀಫ್‌ಫೇಕ್**

ಡೀಫ್‌ಫೇಕ್ ಎನ್ನುವುದು ಕೃತಕ ಬುದ್ಧಿಮತ್ತೆ(ಎಐ) ತಂತ್ರಜ್ಞಾನವನ್ನು ಬಳಸಿಕೊಂಡು ರಚಿಸಲಾದ ಕುಶಲತೆಯಿಂದ ಮಾಡಿದ ವೀಡಿಯೋ ಅಥವಾ ಆಡಿಯೋವಾಗಿದೆ. ಈ ಅತ್ಯಧುನಿಕ ಉಪಕರಣಗಳ ಮೂಲಕ ವ್ಯಕ್ತಿಯ ಹೋಲಿಕೆಯನ್ನು ಮತ್ತೊಬ್ಬರೊಂದಿಗೆ ಅತಿಕ್ರಮಿಸಲು ಅಥವಾ ಬದಲಿಸಲು ಅವಕಾಶ ಮಾಡಿಕೊಡುತ್ತವೆ, ಇದು ಅವರು ಎಂದಿಗೂ ಮಾಡದಿರುವುದನ್ನು ಅವರು ಹೇಳುತ್ತಿರುವಂತೆ ಅಥವಾ ಮಾಡುತ್ತಿರುವಂತೆ ಮಾಡುತ್ತದೆ. ಡೀಫ್‌ಫೇಕ್‌ಗಳ ಎಐ ತಂತ್ರಜ್ಞಾನದ ಮೂಲಕ ರಚಿಸಲಾಗುತ್ತದೆ. ವ್ಯಕ್ತಿಗಳನ್ನು ಮೋಸಗೊಳಿಸಲು ಅಥವಾ ತಪ್ಪು ದಾರಿಗೆಳೆಯಲು ದೃಶ್ಯ ಮತ್ತು ಆಡೀಯೋ ವಿಷಯವನ್ನು ಎಐ ತಂತ್ರಜ್ಞಾದ ಮೂಲಕ ತಿರುಚುವುದೇ ಡೀಫ್‌ಫೇಕ್‌ಗಳಾಗಿವೆ. ಡೀಫ್‌ಫೇಕ್‌ಗಳ ರಚನೆಯು ಜನರೇಟಿವ್ ಅಡ್ವರ್ಸರಿಯಲ್ ನೆಟ್ವರ್ಕ್‌ಗಳು (GAN)ಗಳು ಎಂದು ಕರೆಯಲ್ಪಡುವ ತಂತ್ರವನ್ನು ಒಳಗೊಂಡಿರುತ್ತದೆ. ಇದು ಎರಡು ಸ್ಪರ್ಧಾತ್ಮಕ ಜಾಲಗಳನ್ನು ಒಳಗೊಂಡಿರುತ್ತದೆ. ಈ ಎರಡು ಜಾಲಗಳ ಮೂಲಕ ನೈಜತೆಯನ್ನು ಹೋಲುವ ನಕಲಿ ಚಿತ್ರಗಳು ಅಥವಾ ವೀಡಿಯೋಗಳನ್ನು ತಯಾರಿಸುವುದು, ಅಲ್ಲದೇ ಅಧಿಕೃತ ಮತ್ತು ನಕಲಿ ವಿಷಯಗಳ ನಡುವೆ ವ್ಯತ್ಯಾಸವನ್ನು ತೋರಿಸುವುದು ಇದರ ಪಾತ್ರವಾಗಿದೆ.

**ಮಾಧ್ಯಮ ಸಮಗ್ರತೆ:**

ಒಂದು ಸುದ್ದಿಯ ಸತ್ಯಾಸತ್ಯತೆಯನ್ನು ಕಂಡುಹಿಡಿಲು ಪತ್ರಕರ್ತನು ಸಮಸ್ಯೆಗಳನ್ನು ಕೂಲಂಕುಷವಾಗಿ ತನಿಖೆ ಮಾಡಬೇಕಾದರೆ ಮಾಧ್ಯಮ ಸಮಗ್ರತೆ ಅತ್ಯಗತ್ಯವಾಗಿದೆ. ಮಾಧ್ಯಮ ಸಮಗ್ರತೆಯು ಮಾಧ್ಯಮ ವ್ಯವಸ್ಥೆಯ ಗುಣಗಳನ್ನು ಒಳಗೊಂಡಿದೆ. ಸಾರ್ವಜನಿಕ ಹಿತಾಸಕ್ತಿ ಮತ್ತು ಪ್ರಜಾಪ್ರಭುತ್ವ ಪ್ರಕ್ರಿಯೆಗಳನ್ನು

ಪೂರೈಸುವ ಸಾಮರ್ಥ್ಯಕ್ಕೆ ನಿರ್ಣಾಯಕವಾದ ಮಾಧ್ಯಮ ಕ್ಷೇತ್ರದ ಗುಣಗಳ ಸಂಪೂರ್ಣ ಸೂಚಕಗಳನ್ನು ಸೆರೆಹಿಡಿಯಲು ವೀಕ್ಷಣಾಲಯವು ಮಾಧ್ಯಮ ಸಮಗ್ರತೆ ಎಂಬ ಕಲ್ಪನೆಯನ್ನು ಅಳವಡಿಸಿಕೊಂಡಿದೆ.

**ಅಧ್ಯಯನದ ಉದ್ದೇಶಗಳು**

- ರಾಜಕೀಯ ಕ್ಷೇತ್ರದಲ್ಲಿ ಡೀಫ್‌ಫೇಕ್ ಪ್ರಭಾವವನ್ನು ತಿಳಿದಿಕೊಳ್ಳುವುದು ಈ ಅಧ್ಯಯನದ ಮುಖ್ಯ ಉದ್ದೇಶವಾಗಿದೆ. ರಾಜಕೀಯ ನಾಯಕರ ಕುರಿತಾದ ಡೀಫ್‌ಫೇಕ್ ವೀಡಿಯೋಗಳ ಬಗ್ಗೆ ಅಧ್ಯಯನ ಮಾಡಲಾಗಿದೆ.
- ಚುನಾವಣೆ ಪ್ರಕ್ರಿಯೆಗಳ ಮೇಲೆ ಡೀಫ್‌ಫೇಕ್‌ಗಳ ಪ್ರಭಾವ ತಿಳಿದುಕೊಳ್ಳುವುದು
- ಮಾಧ್ಯಮ ಸಮಗ್ರತೆಯ ಸವಾಗಲುಗಳಾವವು ಮತ್ತು ಮತದಾರರ ಅಭಿಪ್ರಾಯ ಬದಲಿಸುವಲ್ಲಿ ಡೀಫ್‌ಫೇಕ್‌ಗಳ ಪಾತ್ರ ತಿಳಿದುಕೊಳ್ಳುವುದು
- ನಕಲಿ ಸುದ್ದಿ ಮತ್ತು ಡೀಫ್‌ಫೇಕ್‌ಗಳಿಂದ ರಾಜಕೀಯದ ಮೇಲಿನ ಪ್ರಭಾವ ತಿಳಿದುಕೊಳ್ಳುವದು

**ಸಂಶೋಧನಾ ವ್ಯಾಪ್ತಿ**

ಮಾಹಿತಿ, ಮನರಂಜನೆ ಸೇರಿ ಹಲವು ಉದ್ದೇಶಗಳಿಗಾಗಿ ಜನರು ಸಾಮಾಜಿಕ ಮಾಧ್ಯಮಗಳನ್ನು ಬಳಸುತ್ತಿದ್ದಾರೆ. ಆದರೆ ಸಾಮಾಜಿಕ ಮಾದ್ಯಮಗಳಲ್ಲಿ ಬರುವ ಸುದ್ದಿಗಳ ನೈಜತೆಯನ್ನು ಪರಿಶೀಲಿಸುವುದಿಲ್ಲ. ತಂತ್ರಜ್ಞಾನ ಬೆಳವಣಿಗೆಯಿಂದ ಮಾಧ್ಯಮ ಕ್ಷೇತ್ರಕ್ಕೆ ಎಐ ಕಾಲಿಟ್ಟಿದೆ, ಕೃತಕ ಬುದ್ದಿಮತೆಯಿಂದ ಹೊಸ ಹೊಸ ಆವಿಷ್ಕಾರಗಳು ಹುಟ್ಟಿಕೊಳ್ಳುತ್ತಿವೆ. ಕೃತಕವಾಗಿ ವೀಡಿಯೋ ಮತ್ತು ಆಡಿಯೋ ತಯಾರಿಸಬಹುದಾಗಿದೆ. ಇದನ್ನೇ ಬಳಕೆ ಮಾಡಿಕೊಂಡು ಕೆಲವರು ಸಮಾಜದಲ್ಲಿ ನಕಲಿ ಸುದ್ದಿಗಳನ್ನು ಹರಡಿಸಲು ಉಪಯೋಗಿಸಿಕೊಳ್ಳುತ್ತಿದ್ದಾರೆ. ರಾಜಕೀಯ ಕ್ಷೇತ್ರದಲ್ಲೂ ರಾಜಕೀಯ ನಾಯಕರ ವೀಡಿಯೋ ವೈರಲ್ ಮಾಡುವ ಮೂಲಕ ಅಪಪ್ರಚಾರ ಮಾಡುವಂತಹ ಕೆಲಸ ಕಾರ್ಯಗಳು ಮುನ್ನಲೆಗೆ ಬಂದಿದೆ. ಕೆಲವರು ತಂತ್ರಜ್ಞಾವನ್ನು ಸದುಪಯೋಗ ಮಾಡಿಕೊಳ್ಳುತ್ತಿದ್ದರೆ, ಇನ್ನು ಕೆಲವರು ಅದನ್ನು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿರುವ ರಾಜಕೀಯ ನಾಯಕರ ಡೀಫ್‌ಫೇಕ್ ವೀಡಿಯೋಗಳ ಬಗ್ಗೆ ಅಧ್ಯಯನ ಕೈಗೊಳ್ಳಲಾಗುವುದು. ರಾಜಕೀಯ ಕ್ಷೇತ್ರದಲ್ಲಿ ಡೀಪ್ಫೇಕ್ ಹೆಚ್ಚಳಕ್ಕೆ ಕಾರಣ ಮತ್ತು ಚುನಾವಣಾ ಪ್ರಕ್ರಿಯೆಯಲ್ಲಿ ಡೀಫ್‌ಫೇಕ್‌ಗಳ ಪ್ರಭಾವ ತಿಳಿಯುವುದಾಗಿದೆ.

**ಸಂಶೋಧನಾ ವಿಧಾನ**

ಈ ಅಧ್ಯಯನಕ್ಕೆ ಎರಡು ರೀತಿಯ ಸಂಶೋಧನಾ ವಿಧಾನಗಳನ್ನು ಬಳಸಿಕೊಳ್ಳಲಾಗಿದೆ. ವಿಷಯ ವಿಶ್ಲೇಷಣೆ ಮತ್ತು ಕೇಸ್–ಸ್ಟಡಿ ವಿಧಾನದ ಮೂಲಕ ಅಧ್ಯಯನ ನಡೆಸಲಾಗಿದೆ. ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆದ ರಾಜಕೀಯ ನಾಯಕರ ಡೀಫ್‌ಫೇಕ್ ವೀಡಿಯೋಗಳ ಕುರಿತು ಅಧ್ಯಯನ ನಡೆಸಲಾಗಿದೆ. ಒಟ್ಟಾರೆಯಾಗಿ ಎರಡು ರೀತಿಯ ಡೀಫ್‌ಫೇಕ್ ವೀಡಿಯೋಗಳ ಬಗ್ಗೆ ಅಧ್ಯಯನ ನಡೆಸಲಾಗಿದೆ. ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆದ ಡೀಫ್‌ಫೇಕ್ ವೀಡಿಯೋ ಎಷ್ಟು ಶೇರ್ ಆಗಿದೆ,

ಲೈಕ್ ಎಷ್ಟು ಪಡೆದುಕೊಂಡಿದೆ, ಎಷ್ಟು ಕಾಮೆಂಟ್‌ಗಳು ಪಡೆದುಕೊಂಡಿವೆ, ಅಲ್ಲದೇ ಯಾವ ಜಾಲತಾಣಗಳಲ್ಲಿ ವಿಡೀಯೋ ವೈರಲ್ ಮಾಡಲಾಗಿದೆ ಎಂಬುವುದರ ಬಗ್ಗೆ ಸಂಪೂರ್ಣವಾಗಿ ಮಾಹಿತಿಯನ್ನು ಕಲೆ ಹಾಕಲಾಗಿದೆ.

**ದತ್ತಾಂಶ ಸಂಗ್ರಹಣೆ**

ಸಾಮಾಜಿಕ ಜಾಲತಾಣಗಳಲ್ಲಿ ರಾಜಕೀಯ ನಾಯಕರ ಡೀಫ್‌ಫೇಕ್ ವೈರಲ್ ವೀಡಿಯೋ ಬಗ್ಗೆ ಮಾಹಿತಿ ಕಲೆ ಹಾಕಲಾಗಿದೆ. ಈ ಬಗ್ಗೆ ಸಂಶೋಧನಾ ಲೇಖನಗಳು, ದಿನಪತ್ರಿಕೆಗಳ ವರದಿ, ಸಾಮಾಜಿಕ ಜಾಲತಾಣಗಳಲ್ಲಿ ಡೀಫ್‌ಫೇಕ್ ವೀಡಿಯೋ ಬಗ್ಗೆ ಮಾಹಿತಿ ಸಂಗ್ರಹಣೆ ಮಾಡಲಾಗಿದೆ.

**ದತ್ತಾಂಶ ವಿಶ್ಲೇಷಣೆ**

ಡೀಫ್‌ಫೇಕ್ ಮಾದರಿಗಳು, ವಿಶೇಷಾಗಿ ಜನರೇಟಿವ್ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್(ಎಐ) ತಪ್ಪು ಮಾಹಿತಿ ಹರಡುವ ಮೂಲಕ ಪ್ರಜಾಪ್ರಭುತ್ವ ಚುನಾವಣಾ ಪ್ರಕ್ರಿಯೆ ಮೇಲೆ ಪರಿಣಾಮ ಬೀರುತ್ತದೆ. 2024ರ ಲೋಕಸಭಾ ಚುನಾವಣೆಯಲ್ಲಿ ಮಹಾನ್ ನಾಯಕರ ಚಿತ್ರಗಳನ್ನು ಬಳಸಿ ಅದಕ್ಕೆ ಆಡಿಯೋ ಬಳಸಿಕೊಂಡು ರಾಜಕೀಯ ಪ್ರಚಾರ ಮಾಡಿರುವ ಉದಾಹರಣೆಗಳಿವೆ. ಅಷ್ಟೇ ಅಲ್ಲದೇ ಕೆಲವು ನೈಜ ವಿಡಿಯೋಗಳನ್ನ ಬಳಿಸಿಕೊಂಡು ಅದರ ವಿಷಯಗಳನ್ನು ತಿರುಚಿ ರಾಜಕೀಯ ವ್ಯಕ್ತಿ ಬಗ್ಗೆ ಅಪಪ್ರಚಾರ ಮಾಡಿದ್ದನ್ನು ನೋಡಬಹುದಾಗಿದೆ. ಈ ಅಪಾಯವು ಸಾಮಾಜಿಕ ಮಾಧ್ಯಮ ಫ್ಲಾಟ್‌ಫಾರ್ಮ‌ಗಳು ಸತ್ಯ–ಪರಿಶೀಲನೆ ಮತ್ತು ಚುನಾವಣಾ ಸಮಗ್ರತೆಯ ಪ್ರಯತ್ನಗಳನ್ನು ಕಡಿಮೆ ಮಾಡಿರುವುದರಿಂದ ಈ ರೀತಿ ಪ್ರಕರಣಗಳು ಹೆಚ್ಚಾಗಿವೆ.

**ಕೇಸ್–1: ಅಮಿತ್ ಶಾ ಡೀಫ್‌ಫೇಕ್ ವೀಡಿಯೋ ವೈರಲ್:** ಕೇಂದ್ರ ಗೃಹ ಸಚಿವರಾದ ಅಮಿತ್ ಶಾ ಅವರ ಡೀಫ್‌ಫೇಕ್ ವೀಡಿಯೋ ರಚಿಸಿ ಸಾಮಾಜಿಕ ಜಾಲತಾಣಗಲ್ಲಿ ವ್ಯಾಪಕವಾಗಿ ಪ್ರಚಾರ ಮಾಡಲಾಗಿತ್ತು. ದುರುದ್ದೇಶದಿಂದಲೇ ಈ ಕೃತ್ಯ ಮಾಡಲಾಗಿದೆ ಎಂದು ಈ ಕುರಿತು ಸೈಬರ್ ಕ್ರೈಂ ಪೊಲೀಸರಿಗೆ ಬಿಜೆಪಿ ನಾಯಕರು ದೂರು ಕೊಟ್ಟಿದ್ದರು. ದೂರಿನನ್ವಯ ಪೊಲೀಸರು ಆರೋಪಿಗಳನ್ನು ಬಂಧಿಸಿದ್ದರು. ಅಮಿತ್ ಶಾ ಭಾಷಣದ ವೀಡಿಯೋ ತುಣಕನ್ನು ಬಳಸಿಕೊಂಡು ಕೃತಕ ಆಡಿಯೋ ಬಳಸಿಕೊಂಡು ಡೀಫ್‌ಫೇಕ್ ವೀಡಿಯೋ ತಯಾರಿಸಿ ಹರಿಬಿಡಲಾಗಿತ್ತು.

**ಈ ಡೀಫ್‌ಫೇಕ್ ವೀಡಿಯೋದಲ್ಲೇನಿದೆ?: "** ಡೀಫ್‌ಫೇಕ್ ವೀಡಿಯೋದಲ್ಲಿ ಅಮಿತ್ ಶಾ ಅವರು ಎಸ್‌ಸಿ, ಎಸ್‌ಟಿ ಮತ್ತು ಓಬಿಸಿಗಳ ಮೀಸಲಾತಿ ಹಕ್ಕುಗಳನ್ನು ಮೊಟಕುಗೊಳಿಸುವುದಾಗಿ ಘೋಷಿಸಿರುವ ವೀಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ.

**ಮೂಲ ವೀಡಿಯೋದಲ್ಲೇನಿದೆ?:** ಡೀಫ್‌ಫೇಕ್ ವೀಡಿಯೋ ರಚಿಸಲಾದ ಮೂಲ ವೀಡಿಯೋ ಸಂಪೂರ್ಣವಾಗಿ ವಿಭಿನ್ನ ಪದಗಳು ಮತ್ತು ಅರ್ಥಗಳನ್ನು ಹೊಂದಿದೆ. ಬಿಜೆಪಿ ಅಧಿಕಾರಕ್ಕೆ ಬಂದರೆ ಅಸಂವಿಧಾನಿಕ ಮುಸ್ಲಿಂ ಮೀಸಲಾತಿಯನ್ನು ಮುಗಿಸುತ್ತೇವೆ ಮತ್ತು ಈ ಹಕ್ಕನ್ನು ತೆಲಂಗಾಣದ

ಎಸ್‌ಸಿ,ಎಸ್‌ಟಿ ಮತ್ತು ಓಬಿಸಿ ಜನರಿಗೆ ನೀಡಲಾಗುವುದು ಎಂದು ತಮ್ಮ ಮೂಲ ಭಾಷಣದಲ್ಲಿ ಅಮಿತ್ ಶಾ ಹೇಳಿದ್ದಾರೆ ಎಂದು ದೂರಿನನ್ವಯ ತಿಳಿಸಿದ್ದಾರೆ.

ಸಾಮಾಜಿಕ ಜಾಲತಾಣದಲ್ಲಿ ಈ ವೀಡಿಯೋ ವೈರಲ್ ಆಗಿದೆ. ಈ ರೀತಿಯಾಗಿ ಡೀಫ್‌ಫೇಕ್ ವೀಡಿಯೋ ವೈರಲ್ ಆಗಿರುವುದರಿಂದ ತಪ್ಪು ದಾರಿಗೆಳೆಯುವ ತುಣುಕುಗಳು ಮೀಸಲಾತಿ ಮತ್ತು ಸಂವಿಧಾನದ ಬಗ್ಗೆ ಬಿಜೆಪಿ ನಿಲುವಿನ ಬಗ್ಗೆ ವಿವಾದವನ್ನು ಹುಟ್ಟು ಹಾಕುತ್ತದೆ.

**ಕೇಸ್–2 : ಪ್ರಧಾನಿ ಮೋದಿ ಡೀಫ್‌ಫೇಕ್ ವೀಡಿಯೋ ವೈರಲ್:** ಪ್ರಧಾನಮಂತ್ರಿ ನರೇಂದ್ರ ಅವರ ಡೀಫ್‌ಫೇಕ್ ವೀಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಮೋದಿ ಅವರು ಹಾಡು ಹಾಡುತ್ತಿರುವ ಡೀಫ್‌ಫೇಕ್ ವೀಡಿಯೋ ಸಾಮಾಜಿಕ ಜಾಲತಾಣದಲ್ಲಿ ಭಾರೀ ವೈರಲ್ ಆಗಿ ಮಿಲಿಯನ್ ವೀಕ್ಷಣೆ ಪಡೆದುಕೊಂಡಿತ್ತು. ಮೋದಿ ಅವರ ಭಾಷಣದ ವೀಡಿಯೋಗೆ ಬೇರೋಬ್ಬರ ಧ್ವನಿ ಬಳಸಿ ಡೀಫ್‌ಫೇಕ್ ಮೂಲಕ ವೀಡಿಯೋ ರಚನೆ ಮಾಡಲಾಗಿತ್ತು. ಸ್ವತಹ: ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಈ ವೀಡಿಯೋ ಅನ್ನು ನೋಡಿ ಕಳವಳ ಕೂಡ ವ್ಯಕ್ತಪಡಿಸಿದ್ದರು.

ಈ ಬಗ್ಗೆ ಕಾರ್ಯಕ್ರಮವೊಂದರಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಮಾತನಾಡಿದ್ದರು, ಡೀಫ್‌ಫೇಕ್ ಹೊಸ ಸವಾಲನ್ನು ಪ್ರಸ್ತುತಪಡಿಸುತ್ತದೆ, ಎಐ ರಚಿತವಾದ ವೀಡಿಯೋಗಳು ನೈಜವಾಗಿ ಕಾಣುತ್ತವೆ, ನಾನು ಹಾಡುತ್ತಿರುವ ವೀಡಿಯೋವನ್ನು ನೋಡಿದೆ ಎಂದು ಹೇಳಿ ಡೀಫ್‌ಫೇಕ್ ಸಮಸ್ಯಾತ್ಮಕ ಎಂದು ಬೇಸರ ವ್ಯಕ್ತಪಡಿಸಿದರು. ನಾವು ಹೊಸ ತಂತ್ರಜ್ಞಾನದೊಂದಿಗೆ ಜಾಗರೂಕರಾಗಿರಬೇಕು, ಎಐ ತಂತ್ರಜ್ಞಾನವನ್ನು ಎಚ್ಚರಿಕೆಯಿಂದ ಬಳಸಬೇಕು, ಇಲ್ಲದಿದ್ದರೆ ದೊಡ್ಡ ಸಮಸ್ಯೆಗಳನ್ನು ಉಂಟು ಮಾಡುತ್ತದೆ ಎಂದು ಜನರಿಗೆ ಎಚ್ಚರಿಕೆಯನ್ನು ಕೊಟ್ಟಿದ್ದರು.

**ಸಂಶೋಧನಾ ಫಲಿತಾಂಶಗಳು**

- ಡೀಫ್‌ಫೇಕ್‌ಗಳಿಂದ ರೂಪಗೊಂಡ ವ್ಯಾಪಕವಾದ ಸುಳ್ಳು ಅಥವಾ ದಾರಿತಪ್ಪಿಸುವ ಮಾಹಿತಿಯು ತಿಳುವಳಿಕೆಯುಳ್ಳ ನಾಗರಿಕ ಸಂವಾದಕ್ಕೆ ಹಾನಿ ಮಾಡುತ್ತದೆ.
- ಡೀಫ್‌ಫೇಕ್ ತಂತ್ರಜ್ಞಾನ ಬಳಕೆಯು ಮಾಧ್ಯಮದ ಸಮಗ್ರತೆ ಮತ್ತು ನಂಬಿಕೆಯ ಸವಾಲುಗಳಾಗಿವೆ.
- ಡೀಫ್‌ಫೇಕ್ ತಂತ್ರಜ್ಞಾನವು ಜನರನ್ನು ಭ್ರಾಂತಿಗೊಳಿಸುತ್ತದೆ ಮತ್ತು ಅಸಮರ್ಪಕ ಸಂದೇಶಗಳನ್ನು ರವಾನಿಸುತ್ತದೆ.
- ಡೀಫ್‌ಫೇಕ್‌ಗಳಿಂದ ನೈಜ ವಿಷಯವುಳ್ಳ ವೀಡಿಯೋ, ಆಡಿಯೋ ಅಥವಾ ಛಾಯಾಚಿತ್ರ ವಿಶ್ವಾಸಯೋಗ್ಯತೆ ಮತ್ತು ನ್ಯಾಯತ್ವವನ್ನು ಪ್ರಶ್ನಿಸಲು ಕಷ್ಟವಾಗುತ್ತದೆ.
- ಡೀಫ್‌ಫೇಕ್ ವೀಡಿಯೋ ಅಥವಾ ಆಡೀಯೋಗಳಿಂದ ರಾಜಕೀಯ ನಾಯಕರ ಅಪಪ್ರಚಾರ ಆಗುತ್ತದೆ
- ಡೀಫ್‌ಫೇಕ್‌ಗಳಿಂದ ಮೂಲ ಮಾಹಿತಿಯ ಸಾಮರ್ಥ್ಯವನ್ನು ದುರ್ಬಲಗೊಳ್ಳುತ್ತದೆ.

- ಡೀಫ್‌ಫೇಕ್ ತಂತ್ರಜ್ಞಾನ ಬಳಕೆಯು ಮುಕ್ತ ಮತ್ತು ನ್ಯಾಯಯುತ ಪ್ರಜಾಪ್ರಭುತ್ವದ ಚುನಾವಣೆಗಳಿಗೆ ಅಪಾಯವನ್ನುಂಟುಮಾಡುತ್ತದೆ.
- ಕ್ಷಿಪ್ರ ತಾಂತ್ರಿಕ ಪ್ರಗತಿ ಮತ್ತು ಆನ್ಲೈನ್ ಫ್ಲಾಟ್‌ಫಾರ್ಮ್‌ಗಳ ಜಾಗತಿಕ ಸ್ವರೂಪದಿಂದಾಗಿ ಚುನಾವಣಾ ಪ್ರಚಾರಗಳಲ್ಲಿ ಢೀಫ್‌ಫೇಕ್ ಗುರುತಿಸುವುದು ಮಾಧ್ಯಮಗಳಿಗೆ ಸವಾಲಿನ ಕೆಲಸವಾಗಿದೆ.

**ಪರಾಮರ್ಶನ ಗ್ರಂಥಗಳು**


- ಐವಾನ್ ಝುವಿ ಬರೋನ್ ಮತ್ತು ಪಿಕಿ ಇಶ್–ಶಾಲೋಮ್. (2024). *ನಕಲಿ ಸುದ್ದಿಗಳ ಬೆದರಿಕೆಯನ್ನು ಅನ್ವೇಷಿಸುವುದು: ಸತ್ಯಗಳು, ಅಭಿಪ್ರಾಯಗಳು ಮತ್ತು ತೀರ್ಪು*
- ರುದಯ ರಾಂಕಾ ಮತ್ತು ಮೋಕ್ಷಿತ ಸುರಾನಾ. (2024). *ಚುನಾವಣಾ ಸಮಗ್ರತೆಗಾಗಿ ಡೀಪ್‌ಫೇಕ್‌ಗಳ ಪರಿಣಾಮಗಳನ್ನು ಪರಿಶೀಲಿಸಲನೆ*
- ತೊಲುಲೋಪೆ ಕಾಯೋಡೆ–ಅಡೆಡೆಜಿ. (2022). *ಸಾಮಾಜಿಕ ಮಾಧ್ಯಮದಲ್ಲಿ ನಕಲಿ ಸುದ್ದಿಗಳ ಪ್ರಸಾರ: ಪ್ರೇಕ್ಷಕರ ಒಳಗೊಳ್ಳುವಿಕೆಯ ಜನಸಂಖ್ಯಾ ವಿಶ್ಲೇಷಣೆ*
- ಉಚಿತ ಜಯ"ಕ್ರಮ, ಎಮ್ಯಾನುಯೆಲ್ ಒಗಿಮೊನ್ವಿ ಅರಕ್ಪೋಗುನ್, ಜನ ಸುಕ್ಲಾನ್, ಶಾಫೆಂಗ್ ಲಿಯು. (2022). *ಸಾಮಾಜಿಕ ಮಾಧ್ಯಮದಲ್ಲಿ ಫೇಕ್ ನ್ಯೂಸ್: ಸಮಾಜದ ಮೇಲೆ ಪರಿಣಾಮ*